## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ದಿನಾಂಕ : 01-01-2009ರಿಂದ 31-12-2012ರವರೆಗೆ ನಿವೃತ್ತಿ, ರಾಜೀನಾಮೆ, ನಿಧನ, ಮತ್ತಿತರೆ ಕಾರಣಗಳಿಂದ ಖಾಲಿಯಾದ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಓದಲಾಗಿದೆ :-

1. ಸರ್ಕಾರದ ಆದೇಶ ಸಂಖ್ಯೆ : ಇಡಿ 279 ಎಸ್‌ಇಪಿ 2008, ದಿನಾಂಕ : 13-10-2009.
2. ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ದಿನಾಂಕ : 09-12-2011 ಮತ್ತು 17-06-2013ರ ಪತ್ರಗಳ ಸಂಖ್ಯೆ : ಸಿ8(1)(7)(6) ಶಾಶಿಅ/ಖಾಪುಭ/ಇತರೆ/01/2007-08.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಇವರ ದಿನಾಂಕ : 24-12-2012ರ ಪತ್ರ ಸಂಖ್ಯೆ : ಜಿ8/ಜಿ3/ಶಾಶಿಅ:ಖಾಹು:2011-12.
4. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಇವರ ದಿನಾಂಕ : 09-07-2012ರ ಪತ್ರ ಸಂಖ್ಯೆ : ಸಿ4(6) ಖಾಪ್ರೌಶಾ:ಖಾಹು:ಮಾಹಿತಿ:82:2010-11/1392.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಇವರ ದಿನಾಂಕ : 19-06-2013ರ ಪತ್ರ ಸಂಖ್ಯೆ : ಸಿ4(6) ಖಾಪ್ರೌಶಾ:ಖಾಹು;ಮಾಹಿತಿ;182;2012-13/871.
6. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ : ಸಿ8(5)(1) ಖಾಹುಭ/ಅನು. ಇತರೆ-01/2007-08, ದಿನಾಂಕ : 14-03-2014.

- - - - -

ಪ್ರಸ್ತಾವನೆ :-

ಮೇಲೆ ಕ್ರಮಾಂಕ (1)ರ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ : ಇಡಿ 77 ಎಸ್‌ಇಪಿ 2007 (ಭಾಗ), ದಿನಾಂಕ : 31 03 2008ರ ಆದೇಶದಲ್ಲಿ ಈಗಾಗಲೇ ಆರ್ಥಿಕ ಮಿತವ್ಯಯ ಆದೇಶ ಸಡಿಲಿಸಿ ಅನುಮತಿ ನೀಡಿರುವ 2285 ಬೋಧಕ ಹುದ್ದೆಗಳಲ್ಲಿ ಬಾಕಿ ಇರುವ 1130 ಹುದ್ದೆಗಳನ್ನು 2009-10ನೇ ಸಾಲಿನಲ್ಲಿ ಭರ್ತಿ ಮಾಡಲು ಹಾಗೂ 2009 10ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ 2531 ಬೋಧಕ ಹುದ್ದೆಗಳು, ಅಂದರೆ ದಿನಾಂಕ : 01-10-2007ರಿಂದ 31-12-2008ರವರೆಗಿನ ಅವಧಿಯಲ್ಲಿ ನಿವೃತ್ತಿ ಮತ್ತು ಇತರೆ ಕಾರಣಗಳಿಂದ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿಯಾಗಿರುವ 2531 ಬೋಧಕ ಹುದ್ದೆಗಳಲ್ಲಿ 1000 ಬೋಧಕ ಹುದ್ದೆಗಳನ್ನು 2009-10ನೇ ಸಾಲಿನಲ್ಲಿ ಹಾಗೂ ಉಳಿದ 1531 ಬೋಧಕ ಹುದ್ದೆಗಳನ್ನು 2010-11ನೇ ಸಾಲಿನಲ್ಲಿ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ (2)ರಲ್ಲಿ ದಿನಾಂಕ : 09-12-2011ರ ಪತ್ರದಲ್ಲಿ ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಮೈಸೂರ ಮತ್ತು ಬೆಂಗಳೂರು ವಿಭಾಗದಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ನಿಧನ ಮತ್ತು ಇತರೆ ಕಾರಣಗಳಿಂದ ದಿನಾಂಕ : 01-01-2009 ರಿಂದ 31-12-2009ರವರೆಗೆ ಖಾಲಿಯಾಗಿರುವ ಹುದ್ದೆಗಳು 196 ಮತ್ತು 01-01-2010ರಿಂದ 31-12-2010ರ ವರೆಗೆ ಖಾಲಿಯಾಗಿರುವ ಹುದ್ದೆಗಳು 317, ತದನಂತರ ದಿನಾಂಕ : 17-06-2013ರ ಪತ್ರದಲ್ಲಿ ದಿನಾಂಕ : 01-01-2011ರಿಂದ 31-11-2011ರವರೆಗೆ ಖಾಲಿಯಾದ ಹುದ್ದೆಗಳು 511 ಮತ್ತು ದಿನಾಂಕ : 01-01-2012ರಿಂದ 31-12-2012ರವರೆಗೆ ಖಾಲಿಯಾದ ಹುದ್ದೆಗಳು 488, ಹೀಗೆ ಬೆಂಗಳೂರು-ಮೈಸೂರು ವಿಭಾಗದಲ್ಲಿ ದಿನಾಂಕ : 01-01-2009ರಿಂದ 31-12-2012ರವರೆಗೆ ಒಟ್ಟು 1512 ಬೋಧಕ ಹುದ್ದೆಗಳು ಖಾಲಿ ಇರುತ್ತದೆಂದು ವರದಿಸಿರುತ್ತಾರೆ.

ಕ್ರಮಾಂಕ (3)ರಲ್ಲಿ ದಿನಾಂಕ : 24-12-2012ರ ಪತ್ರದಲ್ಲಿ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ತಮ್ಮ ವಿಭಾಗದ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ನಿಧನ ಮತ್ತು ಇತರೆ ಕಾರಣಗಳಿಂದ ದಿನಾಂಕ : 01-01-2009 ರಿಂದ 31-12-2009ರವರೆಗೆ ಖಾಲಿಯಾಗಿರುವ ಹುದ್ದೆಗಳು 88, ಮತ್ತು 01-01-2010 ರಿಂದ 31-12-2010ರವರೆಗೆ ಖಾಲಿಯಾಗಿರುವ ಹುದ್ದೆಗಳು 145, ದಿನಾಂಕ : 01-01-2011ರಿಂದ 31-11-2011ರವರೆಗೆ ಖಾಲಿಯಾದ ಹುದ್ದೆಗಳು 252 ಮತ್ತು ದಿನಾಂಕ :

01-01-2012ರಿಂದ 31-12-2012ರವರೆಗೆ ಖಾಲಿಯಾದ ಹುದ್ದೆಗಳು 316, ಹೀಗೆ ಧಾರವಾಡ ವಿಭಾಗದಲ್ಲಿ ದಿನಾಂಕ : 01-01-2009ರಿಂದ 31-12-2012ರವರೆಗೆ ಒಟ್ಟು 801 ಬೋಧಕ ಹುದ್ದೆಗಳು ಖಾಲಿ ಇರುತ್ತದೆಂದು ವರದಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (4)ರ ಮತ್ತು (5)ರಲ್ಲಿ, ನಿರ್ದೇಶಕರು (ಪ್ರೌಢ ಶಿಕ್ಷಣ) ಮತ್ತು ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಇವರು ತಮ್ಮ ವಿಭಾಗದಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ನಿಧನ ಮತ್ತು ಇತರೆ ಕಾರಣಗಳಿಂದ ದಿನಾಂಕ : 01-01-2009 ರಿಂದ 31-12-2009ರವರೆಗೆ ಖಾಲಿಯಾಗಿರುವ ಹುದ್ದೆಗಳು 34 ಮತ್ತು 01-01-2010ರಿಂದ 31-12-2010ರವರೆಗೆ ಖಾಲಿಯಾಗಿರುವ ಹುದ್ದೆಗಳು 46, ದಿನಾಂಕ : 01-01-2011ರಿಂದ 31-11-2011ರವರೆಗೆ ಖಾಲಿಯಾದ ಹುದ್ದೆಗಳು 43 ಮತ್ತು ದಿನಾಂಕ : 01-01-2012ರಿಂದ 31-12-2012ರವರೆಗೆ ಖಾಲಿಯಾದ ಹುದ್ದೆಗಳು 80, ಹೀಗೆ ಗುಲ್ಬರ್ಗಾ ವಿಭಾಗದಲ್ಲಿ ದಿನಾಂಕ : 01-01-2009ರಿಂದ 31-12-2012ರವರೆಗೆ ಒಟ್ಟು 203 ಬೋಧಕ ಹುದ್ದೆಗಳು ಖಾಲಿ ಇರುತ್ತದೆಂದು ವರದಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (5)ರ ಪತ್ರದಲ್ಲಿ 2008ರವರೆಗೆ ದಿನಾಂಕ : 31-12-2008ರ ಅಂತ್ಯದವರೆಗೆ ಖಾಲಿಯಾದ 3661 ಹುದ್ದೆಗಳನ್ನು ತುಂಬಲು ಅನುಮತಿ ನೀಡಿದ್ದು, ಹುದ್ದೆಗಳು ಶಾಲೆಗಳಲ್ಲಿನ ಮಕ್ಕಳ ಹಾಜರಾತಿ ಕೊರತೆ, ಆಡಳಿತ ಮಂಡಳಿಗಳಲ್ಲಿ ಇರುವ ವ್ಯಾಜ್ಯ, ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕನಿಷ್ಠಕ್ಕಿಂತ ಕಡಿಮೆ ಇರುವ ಶಾಲೆಗಳನ್ನು ಶೂನ್ಯ ಮಾಡಿ ಅಲ್ಲಿರುವ ಶಿಕ್ಷಕರುಗಳನ್ನು ಹೆಚ್ಚುವರಿಯೆಂದು ಗುರುತಿಸಿ ಅಗತ್ಯ ಕಾರ್ಯಭಾರವಿರುವ ಶಾಲೆಗಳಿಗೆ ಮರುಹಂಚಿಕೆ ಮಾಡಿರುವ ಕಾರಣಗಳಿಂದ 1334 ಬೋಧಕ ಸಿಬ್ಬಂದಿಗಳ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಲಾಗಿದೆ.

ಮೇಲೆ ತಿಳಿಸಲಾದ ಅಂಶಗಳನ್ವಯ ಪರಿಶೀಲಿಸಿ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಇಡಿ 15 ಎಸ್‌ಇಪಿ 2011, ಬೆಂಗಳೂರು, ದಿನಾಂಕ : 16-07-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಹಿಂದೆ ದಿನಾಂಕ : 31-12-2008ರ ಪೂರ್ವದಲ್ಲಿ ಖಾಲಿಯಾದ 3661 ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಒಪ್ಪಿಗೆ ನೀಡಿದ್ದು, ಅದರಲ್ಲಿ 2327 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಲು ಸಾಧ್ಯವಾಗಿದ್ದು, ವಿವಿಧ ಶಾಲೆಗಳು ನಿಗಧಿತ ಮಾನದಂಡಗಳನ್ನು ಪೂರೈಸದಿರುವುದರಿಂದ ಇನ್ನೂ 1334 ಹುದ್ದೆಗಳು ಭರ್ತಿ ಮಾಡದೇ ಉಳಿದಿರುವ ಹುದ್ದೆಗಳನ್ನು ದಿನಾಂಕ : 01-01-2009ರಿಂದ 31-12-2012ರವರೆಗೆ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದಿಂದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ತೆರವಾಗಿರುವ 2516 ಬೋಧಕ ಹುದ್ದೆಗಳನ್ನು ಈಗಾಗಲೇ ಅನುಮತಿ ನೀಡಿ ಬಾಕಿ ಉಳಿದಿರುವ 1334 ಹುದ್ದೆಗಳನ್ನು ಬೆಂಗಳೂರು ವಿಭಾಗಕ್ಕೆ 480, ಮೈಸೂರು ವಿಭಾಗಕ್ಕೆ 320, ಧಾರವಾಡ ವಿಭಾಗಕ್ಕೆ 427 ಮತ್ತು ಗುಲ್ಬರ್ಗಾ ವಿಭಾಗಕ್ಕೆ 107ರಂತೆ ಹುದ್ದೆ ಖಾಲಿಯಾಗಿರುವ ವರ್ಷದ ಜೇಷ್ಠತೆಗೆ ಅನುಸಾರವಾಗಿ ಈ ಕೆಳಕಾಣಿಸಿದ ಅಂಶಗಳ ಬಗ್ಗೆ ದೃಢಪಡಿಸಿಕೊಂಡು ಭರ್ತಿ ಮಾಡಲು ಅನುಮತಿ ನೀಡಲಾಗಿದೆ :-

1. ಶಾಲೆ ಈಗಾಗಲೇ ವೇತನಾನುದಾನಕ್ಕೆ ಒಳಪಟ್ಟು ನಿವೃತ್ತಿ, ರಾಜೀನಾಮೆ, ನಿಧನ, ಮತ್ತು ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲಾದ ಬಡ್ತಿಯಿಂದ ಹುದ್ದೆ ಖಾಲಿಯಾಗಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳತಕ್ಕದ್ದು;
2. ಹುದ್ದೆ ಭರ್ತಿ ಮಾಡಲು ಅನುಮೋದನೆ ನೀಡಿದ ನಂತರ ಒಟ್ಟಾರೆ ಅನುದಾನಕ್ಕೆ ಒಳಪಡಿಸಿದ ಹುದ್ದೆಗಳ ಮಿತಿಯಲ್ಲಿರುವುದನ್ನು ದೃಢೀಕರಿಸಿಕೊಳ್ಳತಕ್ಕದ್ದು;

3. ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ, ವಯೋಮಿತಿ ಹಾಗೂ ಮೀಸಲಾತಿ ಪಾಲನೆ, ನೇಮಕಾತಿ ನಿಯಮಗಳಂತೆ ಪಾರದರ್ಶಕವಾಗಿ ಹುದ್ದೆ ಭರ್ತಿ ಮಾಡಿರುವುದನ್ನು ದೃಢೀಕರಿಸಿಕೊಳ್ಳತಕ್ಕದ್ದು;
4. ಶಿಕ್ಷಕರ ನೇಮಕಾತಿಯನ್ನು ಅನುದಾನಸಹಿತವಾಗಿ ಅನುಮೋದಿಸಿ ಆದೇಶ ಹೊರಡಿಸಿದ ದಿನಾಂಕದಿಂದ ಮಾತ್ರ ವೇತನಾನುದಾನ ನೀಡತಕ್ಕದ್ದು;
5. ಅನುದಾನ ಸಂಹಿತೆ ಹಾಗೂ ಸರ್ಕಾರದಿಂದ ಕಾಲ ಕಾಲಕ್ಕೆ ಹೊರಡಿಸಿದ ಆದೇಶಗಳನ್ನು ಪಾಲಿಸತಕ್ಕದ್ದು;
6. ದಿನಾಂಕ : 31-08-2008ರ ಸರ್ಕಾರಿ ಆದೇಶ ಸಂಖ್ಯೆ : ಇಡಿ 77 ಎಸ್ಇಪಿ 2007 (ಭಾಗ)ದಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಈ ಪ್ರಕರಣಗಳಿಗೆ ಅನ್ವಯಿಸುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 501 ವೆಚ್ಚ-8/2014, ದಿನಾಂಕ : 27-05-2014ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಎಂ. ಗಣೇಶ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ).

ಪ್ರತಿ :-

ಸಂಕಲನಾಕಾರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ – ಈ ಆದೇಶವನ್ನು ಮುಂದಿನ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು, ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ), 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಇವರಿಗೆ ಕಳುಹಿಸಲು ಕೋರಿದೆ.

ಇವರಿಗೆ :-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
5. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು;
6. ಎಲ್ಲಾ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
7. ಎಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-8), ವಿಧಾನ ಸೌಧ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ಶಿಕ್ಷಣ ಇಲಾಖೆ ಮಾಹಿತಿ ಕೇಂದ್ರ (ವಾರ್ಷಿಕ ಸಂಕಲನದಲ್ಲಿ ಪ್ರಕಟಿಸಲು).
11. ನೋಡಲ್ ಅಧಿಕಾರಿ, ಮಾಹಿತಿ ಕೇಂದ್ರ, ಶಿಕ್ಷಣ ಸಚಿವಾಲಯ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು, (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು);
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.